ಏನೋ ನೆನಪಾದಂತಾಗಿ ಗಡಿಬಿಡಿಯಲ್ಲಿ ಪಕ್ಕದ ಸೀಟಿನ ಕರ್ಟನ್ ಸರಿಸಿದ. ಒಳಗಡೆ ನಲ್ಲತಂಬಿ ಗಡದ್ದು ನಿದ್ರೆಯಲ್ಲಿದ್ದ. ಸೊಳ್ಳೆಯೊಂದು ಅವನ ತೋಳಿನ ಮೇಲೆ ಕುಳಿತು ರಕ್ತ ಹೀರುತ್ತಿತ್ತು. ಸಾವಕಾಶವಾಗಿ ಅದನ್ನು ಓಡಿಸಿದ ಜಬ್ಬರ್ ತಾನು ಹೊದ್ದ ಲುಂಗಿಯನ್ನು ತೆಗೆದು ಅವನಿಗೆ ಹೊದಿಸಿ, ಮೈ ಮುರಿಯುತ್ತಾ ಎದ್ದು ನಿಂತ. ಬೇಡವೆಂದರೂ ಕಣ್ಣು ಬಸ್ಸಿನ ಹಿಂಭಾಗದತ್ತಲೇ ಓಡುತ್ತಿತ್ತು. ಅವನ ಕಲ್ಪನೆಯಲ್ಲಿನ ಅರವಿಂದ ಪ್ರತಿದಿನ, ಪ್ರತೀಕ್ಷಣ ಅಲ್ಲಿ ನೇಣು ಬಿಗಿದುಕೊಳ್ಳುತ್ತಲೇ ಇದ್ದ. ಜನ ಮುತ್ತುತ್ತಲೇ ಇದ್ದರು.

ಅರವಿಂದ ಹೋದ ಬಹಳ ದಿನಗಳ ತನಕ ಶಿವಶಕ್ತಿ ಸ್ಲೀಪರ್ ಗೆ ಯಾರೂ ಕ್ಲೀನರ್‌ಗಳೇ ಇರಲಿಲ್ಲ. ಜಬ್ಬರನೇ ತೀರ್ಥಹಳ್ಳಿ, ಶಿವಮೊಗ್ಗಗಳಲ್ಲಿ, 'ತರೀಕೆರೆ, ಕಡೂರು, ಬೀರೂರು, ತುಮಕೂರು, ಬೆಂಗ್ಳೂರ್.. ಯಾರ್ರೀ ಯಾರ್ರೀ' ಎಂದು ಕೂಗುತ್ತಿದ್ದ. ಹಾಗೆ ಕರೆಯುವಾಗ ಥಟ್ಟನೆ ಅದು ತನ್ನ ದನಿಯಾಗಿದೆ ಅರವಿಂದನೇ ಕರೆಯುತ್ತಿದ್ದಾನೆ ಎಂದೆನಿಸಿ ಕೂಗುವುದನ್ನು ನಿಲ್ಲಿಸಿಬಿಡುತ್ತಿದ್ದ. ಸಾವುಕಾರರು ಹೊಸ ಕ್ಲೀನರ್‌ನನ್ನು ನೇಮಿಸುವ ಮಾತಾಡಿದಾಗ ಬೇಡವೇ ಬೇಡ ಎಂದು ಹಠ ಮಾಡಿದ್ದ. ಶಿವಶಕ್ತಿ ಬರೀ ಬಸ್ಸಲ್ಲ. ಕೇವಲ ಒಂದು ಓಡುವ ಯಂತ್ರವಲ್ಲ. ಇದು ಬದುಕು. ಬದುಕಿನ ಸ್ಥಾನಗಳು ಒಬ್ಬರು ಎದ್ದು ಹೋದ ಕೂಡಲೇ ಇನ್ನೊಬ್ಬರು ಬಂದು ಕುಳಿತುಕೊಳ್ಳುವ ಹುದ್ದೆಗಳಲ್ಲ ಎಂಬುದವನ ನಂಬಿಕೆಯಾಗಿತ್ತು. ಕೊನೆಗೆ ಸಾವ್ಕಾರರು ಗದರಿದ ಮೇಲೆಯೇ ಅವನು ಇನ್ನೊಬ್ಬ ಕ್ಲೀನರ್‌ನನ್ನು ನೇಮಿಸಿಕೊಂಡಿದ್ದು.

ಅರವಿಂದ ಹೋದ ಸ್ವಲ್ಪ ದಿನಗಳ ನಂತರ ಒಂದು ರಾತ್ರಿ ಅವನ ಕೆಲ ಗೆಳೆಯರು ಅದೇ ಅಂಡರ್‌ಪಾಸಿನ ಕತ್ತಲೊಳಗಿನಿಂದ ನಡೆಯುತ್ತಾ ಬಂದಿದ್ದರು. ಬಂದೊಡನೆಯೇ ನೇರ ಬಸ್ಸು ಹತ್ತಿ ಜಬ್ಬರನೆದುರು ನಿಂತು 'ಭೈಯ್ಯಾ..' ಎಂದು ಅಳತೊಡಗಿದ ಅವರೆಲ್ಲರೂ ಕುಡಿದಿದ್ದರು ಕೂಡ. ಅರವಿಂದ ತನ್ನ ಬಾಳಿನುದ್ದಕ್ಕೂ ಅನೇಕ ಅನಾಹುತಗಳನ್ನು ಮಾಡಿಕೊಂಡಿದ್ದನೆಂದೂ, ತಾವು ಅವನನ್ನು ಹೆಜ್ಜೆ ಹೆಜ್ಜೆಗೂ ಎಚ್ಚರಿಸಿದ್ದೆವೆಂದೂ ಕೊಚ್ಚಿಕೊಂಡರು. ಏಕ್ ಏಕ್ ಎಂದು ತೇಗುತ್ತಾ ಸಾವೊಂದೇ ಅವನಿಗಿದ್ದ ಕಟ್ಟಕಡೆಯ ದಾರಿಯಾಗಿತ್ತೆಂಬಂತೆ ಮಾತಾಡಿದರು. ಇವರನ್ನು ಹೀಗೇ ಬಿಟ್ಟರೆ ತನ್ನೊಳಗಿನ್ನೂ ಜೀವಂತವಾಗಿಯೇ ಇರುವ ಅರವಿಂದನನ್ನೂ ಕೊಂದುಬಿಡುತ್ತಾರೆನ್ನಿಸಿ ಜಬ್ಬರ್, 'ಬೋಳೀ ಮಕ್ಳಾ, ಇಲ್ಲಿಂದ ಎದ್ದು ಹೋಗಿಲ್ಲಾಂದ್ರೆ ಒಬ್ಬೊಬ್ರನ್ನೂ ಸಿಗಿದು ಸೈತಾನ್ಗೆ ಹಾಕ್ಬಿಡ್ತೀನಿ ಹರಾಮ್ ಖೋರೋ' ಎಂದು ಪಕ್ಕದಲ್ಲಿದ್ದ ಮುರಿದ ಗೇರ್ ಲಿವರ್‌ನ್ನು ಝಳಪಿಸಿದ್ದ.

ಅರವಿಂದನ ಸಾವನ್ನು ಭೇದಿಸಿದರೆ ಇಡೀ ಮನುಷ್ಯ ಲೋಕಕ್ಕೆ ಅರ್ಥವಾಗದ ರಹಸ್ಯವೊಂದು ಅನಾವರಣಗೊಳ್ಳುತ್ತದೆ ಎಂದು ಜಬ್ಬರನಿಗೆ ತೀವ್ರವಾಗಿ ಅನ್ನಿಸುತ್ತಿತ್ತು. ದುಡಿಯುವ ಬಲವಿದ್ದವನು, ಬದುಕಲು ಗೊತ್ತಿದ್ದವನು, ಸಾವಿಗೆ ಹೆದರದವನು ಅದೇಕೆ ಹಾಗೆ ನೇಣು ಹಾಕಿಕೊಂಡ? ತೀರಾ ನೇಣು ಬಿಗಿದುಕೊಳ್ಳುವ ಮುನ್ನ 'ಸಲಾಂ ವಲೈಕುಂ' ಎಂದವನು ಕಳಿಸಿದ್ದ ಮೆಸೇಜನ್ನು ಓದುವಾಗೆಲ್ಲ ಅದು ಅವನ ಇನ್ನಿತರ ಗಮ್ಮತ್ತಿನ ಮಾತುಗಳಂತೆಯೇ ಅನಿಸುತ್ತಿತ್ತಲ್ಲದೇ ಆತ್ಮಹತ್ಯೆ ಮಾಡಿಕೊಳ್ಳುವ ಮುನ್ನದ ಕಟ್ಟಕಡೆಯ ಸಂದೇಶದಂತೆ ಅನ್ನಿಸಿರಲೇ ಇಲ್ಲ. ಆ ಹುಡುಗರು ಹೇಳಿದಂತೆ ನಿಜಕ್ಕೂ ಅವನು ಬದುಕನ್ನು ನರಕ ಮಾಡಿಕೊಂಡಿದ್ದನಾ? ಅಥವಾ 'ಈ ಬದುಕು ಇಷ್ಟು ಸಾಕು' ಎಂದು ನಿರ್ಧರಿಸಿ ಎದ್ದು ಹೋದನಾ? ಅವನ ಸಾವಿನ ಕಾರಣವೇನಾದರೂ ತಿಳಿದುಬಿಟ್ಟರೆ 'ಅದನ್ನು ತಪ್ಪಿಸಬೇಕಿತ್ತು' ಎಂಬ ಯಾತನೆ ಜೋರಾಗುತ್ತದೆ. ಅದಕ್ಕಿಂತ ಹೀಗೆ ಅವನ ಮರಣದ ಗುಟ್ಟು ಹೀಗೆ ರಹಸ್ಯವಾಗಿರುವುದೇ ಒಳಿತು ಎಂದುಕೊಂಡ ಜಬ್ಬರ್.

* * *

ದೀಪಾವಳಿ ಹಬ್ಬದ ಪ್ರಯುಕ್ತ ರಜೆಗಳು ಸಾಲಾಗಿ ಬಂದಿದ್ದವು. ಇಡೀ ಶಹರವೇ ಕೈಯಲ್ಲೊಂದು ಹಣತೆ ಹಿಡಿದು ಬತ್ತಿಯ ಹುಡುಕಿ ಹೊರಟಂತೆ ಊರಿನತ್ತ ಹೊರಟಿತ್ತು. ಮೆಜೆಸ್ಟಿಕ್ಕಿನಾಚೆಯ ಸುರಂಗದೊಳಗೆ ಸಾಲಾಗಿ ನಿಲ್ಲಿಸಿದ್ದ ಖಾಸಗೀ ಬಸ್ಸುಗಳ ಮುಗಿಯದ ಸಾಲಿನ ನಡುವೆ ತಮ್ಮ ಬಸ್ಸನ್ನು ಹುಡುಕಿ ನಡೆಯುತ್ತಿದ್ದವರೆಲ್ಲರ ಕಣ್ಣಲ್ಲಿ ಇನ್ನಷ್ಟೇ ಹೊತ್ತಿಕೊಳ್ಳಬೇಕಾದ ಮತಾಪುಗಳಿದ್ದವು. ಸುರಂಗದ ನೆರಳು ಹಾಗೂ ಬೀದಿದೀಪದ ಬೆಳಕುಗಳೆರಡೂ ಬೆರೆಯುವ ಜಾಗದಲ್ಲಿ ಶಿವಶಕ್ತಿಯನ್ನು ನಿಲ್ಲಿಸಿಕೊಂಡಿದ್ದ ಜಬ್ಬರ್ ಕುಳಿತಲ್ಲೇ ಕಾಲು ಚಾಚಿಕೊಂಡು ವಿಶ್ರಮಿಸುತ್ತಾ ಮುಂದಿನ ಅಹೋರಾತ್ರಿಯ ಚಲಾವಣೆಗೆ